<u>ದಿನಾಂಕ : *06-03-2026* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : *4* ನೇ ಎದುರುದಾರ ಪರವಾಗಿ ಶ್ರೀ. ಆರ್ ಪಿ ಕೆ ವಕೀಲರಿಂದ</u>**

ಬಸಮ್ಮ ರವರು ಅಪಘಾತವಾದ ದಿನ ಕೂಲಿ ಕೆಲಸಕ್ಕೆ ಹೋಗಿದ್ದರು. ಆ ದಿನ ಬಂಡಿಯಲ್ಲಿ 8 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಮತ್ತು 2 ಎತ್ತುಗಳು ಇದ್ದವು. ಆ ದಿನ ಜೋಳದ ತೆನೆ ತೆಗೆಯಲು ಹೋಗಿದ್ದರು. ಆ ಬಂಡಿಯಲ್ಲಿ ಜೋಳದ ತೆನೆ ತುಂಬಿದ್ದರು ಎಂದರೆ ಸರಿಯಲ್ಲ. ಆ ಬಂಡಿಯ ಮೇಲೆ ಜೋಳದ ತೆನೆ ಮತ್ತು ಜೋಳದ ರಾಶಿ ತುಂಬಿದ್ದರು ಎಂದರೆ ಸರಿಯಲ್ಲ. ಆ ಬಂಡಿಯಲ್ಲಿ ಜೋಳದ ರಾಶಿ ಮತ್ತು ಜೊಳದ ತೆನೆ ತುಂಬಿದ್ದರಿಂದ ತುಂಬಾ ಲೋಡ ಆಗಿತ್ತು ಎಂದರೆ ಸರಿಯಲ್ಲ. ಹುನಗುಂದ ದಿಂದ ರಕ್ಕಸಗಿಗೆ ಹೋಗಬೇಕಾದರೆ ಬಲಗಡೆ ರಕ್ಕಸಗಿ ಗ್ರಾಮ ಬರುತ್ತದೆ. ಸದರಿ ಜಮೀನು ಹುನಗುಂದದ ಕಡೆಗೆ ಇತ್ತು ಎಂದರೆ ಸರಿ. ಅಪಘಾತವಾದ ಜಾಗೆಯಲ್ಲಿ ಬಲಕ್ಕೆ ಹೊಳ್ಳಿದರೆ ರಕ್ಕಸಗಿ ಗ್ರಾಮ ಬರುತ್ತದೆ ಎಂದರೆ ಸಾಕ್ಷಿದಾರರು 700 ರಿಂದ 800 ಮೀಟರ ಮುಂದೆ ಹೋಗಿ ಹೊಳ್ಳಿದರೆ ರಕ್ಕಸಗಿ ಗ್ರಾಮ ಬರುತ್ತದೆ ಎಂದು ಹೇಳುತ್ತಾರೆ. ಬಂಡಿಯನ್ನು ನಮ್ಮೂರಿನ ಕಡೆ ಹೊಳ್ಳಿಸಬೇಕಾದರೆ ಅಪಘಾತವಾದ ಜಾಗೆಯಲ್ಲಿ ಹೊಳ್ಳಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಬಂಡಿಯನ್ನು ಸದರಿ ಜಾಗೆಯಲ್ಲಿ ಹೊಳ್ಳಿಸುತ್ತಿದ್ದನು ಎಂದರೆ ಸರಿಯಲ್ಲ. ಬಂಡಿಯ ಚಾಲಕನು ಒಮ್ಮೆಂದೊಮ್ಮೆಲೆ ಬಂಡಿಯನ್ನು ಹೊಳ್ಳಿಸಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ರಕ್ಕಸಗಿ ಹತ್ತಿರ ಡಿವೈಡರ ಇರಲಿಲ್ಲ. ಆಗ ಡಿವೈಡರ ಇರದೇ ಇರುವುದರಿಂದ ಎಲ್ಲಿ ಬೇಕಾದಲ್ಲಿ ಬಂಡಿಯನ್ನು ಹೊಳ್ಳಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತವು ಬಂಡಿಯ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ 57 ರಿಂದ 58 ವರ್ಷ ವಯಸ್ಸು ಆಗಿತ್ತು. ನನ್ನ ತಾಯಿಗೆ 65 ರಿಂದ 68 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಗೆ ಆಗ ದುಡಿಯುವ ವಯಸ್ಸು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ವಯಸ್ಸನ್ನು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಆಧಾರ ಕಾರ್ಡನ್ನು ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಿಪಿ-6 ರಲ್ಲಿ ನನ್ನ ತಾಯಿಯ ವಯಸ್ಸು 60 ವರ್ಷ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಾಯಿಗೆ 58 ವರ್ಷ ವಯಸ್ಸು ಇತ್ತು ಎಂದು ಹೇಳುತ್ತಾರೆ. ನನ್ನ ತಾಯಿಯ ನಾನು ಒಬ್ಬನೇ ವಾರಸುದಾರ ಎಂದು ತೋರಿಸಲು ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಲಾರಿ ಚಾಲಕನ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಅವನು ಓಡಿ ಹೋಗಿರುತ್ತಾನೆ. ದೂರನ್ನು ಹನಮಪ್ಪ ಹೂಗಾರ ಎನ್ನುವವರು ಕೊಟ್ಟಿರುತ್ತಾರೆ. ದೂರಿನಲ್ಲಿ ಹನಮಂತ ಭೀಮಪ್ಪ ಗೌಡರ ಎನ್ನುವ ಲಾರಿ ಚಾಲಕ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು 1 ನೇ ಎದುರುದಾರರನ್ನು ಆರೋಪಿಎಂದು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ

ಎಂದು ಹೇಳುತ್ತಾರೆ. ಪೋಲಿಸರು ಲಾರಿ ಚಾಲಕನಿಗೆ ಡಿ ಎಲ್ ಇರುವುದಿಲ್ಲ ಎಂದು ದೊ.ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಲಾರಿ ಚಾಲಕನಿಗೆ ಪರಮಿಟ್ ಇರಲಿಲ್ಲ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಲಾರಿ ಚಾಲಕನಿಗೆ ಡಿಎಲ್ ಮತ್ತು ಪರಿಮಿಟ್ ಇರದೇ ಇರುವುದರಿಂದ 2 ನೇ ಎದುರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿಯಲ್ಲ. ಲಾರಿಚಾಲಕನ ತಪ್ಪು ಇರುವುದಿಲ್ಲ ಎಂದು ಅರ್ಜಿಯನ್ನು ವಿಳಂಬವಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಎದುರುದಾರರು ಒಂದಾಗಿ ಪರಿಹಾರದ ಹಣವನ್ನು ಪಡೆಯಬೇಕೆಂದು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು 2 ವರ್ಷಗಳ ಕಾಲ ವಿಳಂಬ ಮಾಡಿ ಸಲ್ಲಿಸಿದ್ದರಿಂದ ಪರಿಹಾರದ ಹಣವನ್ನು ಪಡೆಯಲು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ತಾಯಿ ತೀರಿಕೊಂಡಿದ್ದು, ಶವ ಸಂಸ್ಕಾರಗೊಸ್ಕರ 50 ಸಾವಿರ ರೂ.ಗಳನ್ನು ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ತಿಂಗಳಿಗೆ 16 ಸಾವಿರ ರೂ.ಗಳನ್ನು ಗಳಿಸುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ತಿಂಗಳಿಗೆ 16 ಸಾವಿರ ರೂ. ವರಮಾನ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಒಬ್ಬನೇ ವಾರಸುದಾರ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸದೇ ಇರುವುದರಿಂದ ಈ ಅರ್ಜಿಯು ನಡೆಯುವುದಿಲ್ಲ ಎಂದರೆ ಸರಿಯಲ್ಲ. 4 ನೇ ಎದುರುದಾರರ ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.